# -: ವಾರ್ಡ್ ಸಮಿತಿ ಸಭೆ :-
## ದಿನಾಂಕ: 07.12.2020

ವಿಷಯ: ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರದಲ್ಲಿ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.
ಉಲ್ಲೇಖ: ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/ 2020-21 ದಿನಾಂಕ: 21.09.2020

ದಿನಾಂಕ 07.12.2020 ರಂದು ಸಮಯ ಬೆಳಿಗ್ಗೆ 10.00 ಗಂಟೆಗೆ ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರ ವಾರ್ಡ್ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ರಾಜಶೇಖರ್, (ಅಧ್ಯಕ್ಷರು) ನೋಡಲ್ ಅಧಿಕಾರಿಗಳು
2. ಶ್ರೀ ವಿ.ಆರ್. ಕೃಷ್ಣಪ್ಪ ಸಹಾಯಕ ಅಭಿಯಂತರರು, ಹಾಗೂ ಕಾರ್ಯದರ್ಶಿ
3. ವಿ. ತಿಮ್ಮಪ್ಪ, ತೋಟಗಾರಿಕೆ ನಿರೀಕ್ಷಕರು
4. ಅರುಣ್ ಕುಮಾರ್ ಹೆಚ್.ಆರ್. ಮೌಲ್ಯಮಾಪಕರು (ಕಂದಾಯ)
5. ಶ್ರೀಮತಿ ಗೀತಾ ಕೆ. ಕಿರಿಯ ಆರೋಗ್ಯ ಪರಿವೀಕ್ಷಕರು
6. ಕೆ.ವಿ. ಲೋಕೇಶ್,

ಶ್ರೀ ವಿ.ಆರ್. ಕೃಷ್ಣಪ್ಪ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕೇಬಲ್ ಹಾಗೂ ಪೈಪ್ ಅಳವಡಿಸಲು ಗುಂಡಿಗಳನ್ನು ಹಾಗೂ ರಸ್ತೆಗಳನ್ನು ಅಗೆದಿದ್ದು, ಡಾಂಬರೀಕರಣ ಮಾಡದೇ ಹಾಗೆ ಬಿಟ್ಟಿರುವುದರಿಂದ ಸಾರ್ವಜನಿಕರ ಹಾಗೂ ವಾಹನಗಳ ಓಡಾಟಕ್ಕೆ ತುಂಬಾ ತೊಂದರೆಯಾಗುತ್ತಿದ್ದು ಈ ಬಗ್ಗೆ ಸದರಿ ಕಛೇರಿಗಳಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.
2. ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿರುತ್ತಾರೆ.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

**ಸಹಾಯಕ ಅಭಿಯಂತರರು**
**ಮತ್ತು ಕಾರ್ಯದರ್ಶಿಗಳು,**
**ವಾರ್ಡ್ ನಂ. 68 ಮಹಾಲಕ್ಷ್ಮೀಪುರ**

**ಅಧ್ಯಕ್ಷರು**
**ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ 68,**
**ಮಹಾಲಕ್ಷ್ಮೀಪುರ**